(ಐ) ವಿಷಯ: ತಿಪಟೂರು ನಗರದ ರಸ್ತೆಯನ್ನು ಅಗಲೀಕರಣಗೊಳಿಸುವ ಬಗ್ಗೆ.

ಶ್ರೀ ಬಿ.ನಂಜಾಮರಿ (ತಿಪಟೂರು): ಮಾನ್ಯ ಅಧ್ಯಕ್ಷರೇ, ಈ ದಿವಸ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ನಮ್ಮ ಕ್ಷೇತ್ರದಲ್ಲಿ ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿ ಕೊಬ್ಬರಿಗೆ ಹೆಸರಾದ ತಿಪಟೂರು ನಗರ ಇವತ್ತು 206ರ ಹೆದ್ದಾರಿ ನಗರ ಮಧ್ಯ ಭಾಗದಲ್ಲಿ ಸುಮಾರು ಐದು ಕಿಲೋ ಮೀಟರ್ ಪಟ್ಟಣ ಭಾಗದಲ್ಲಿ ಹೋಗುತ್ತಿದ್ದು, ಆ ರಸ್ತೆ ಚಿಕ್ಕದಾಗಿದ್ದು ಅದನ್ನು ಅಗಲೀಕರಣವನ್ನು ಸುಮಾರು 97–98ನೇ ಇಸವಿಯಿಂದಲೂ ಮಾಡಬೇಕೆಂದು ಇದ್ದೆವು. 1997ರಲ್ಲೇ ಅಗಲೀಕರಣ ಮಾಡಲು ನಿರ್ಧಾರವಾಗಿದ್ದರೂ ಸಹ ಕಾರಣಾಂತರದಿಂದ ಅದು ತಡೆಹಿಡಿದು ನಿಂತಿತು. ತಿಪಟೂರಿಗೆ ಕರ್ನಾಟಕದ 7 ಜಿಲ್ಲೆಗಳಿಂದ ಕೊಬ್ಬರಿ ಬರುತ್ತದೆ. ತಿಪಟೂರು ಮಾರ್ಕೆಟ್ಟಿಗೆ ಹಾಸನ, ತುಮಕುರು ಮಂಡ್ಯ, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ ಹೀಗೆ ಎಲ್ಲಾ ಕಡೆಯಿಂದ ಬರುತ್ತದೆ. ಆದ್ದರಿಂದ ಈ ತಿಪಟೂರಿನದು ಇವತ್ತು ಅಗಲೀಕರಣ ಆಗಬೇಕಾಗಿದೆ. ಏಕೆಂದರೆ ಲಕ್ಷಾಂತರ ಜನ ತಿಪಟೂರಿನಲ್ಲಿ ಜೀವನ ಮಾಡುತ್ತಾರೆ. ಅಲ್ಲಿ ತೆಂಗಿನಕಾಯಿ ಪುಡಿ ಮಾಡುವ 25 ಫ್ಯಾಕ್ಟರಿಗಳಿವೆ. ಲಾರಿಗಳು ಓಡಾಡುತ್ತವೆ. ಎಆರ್‌ಟಿಓ ಅವರಿಂದ ಮಾಹಿತಿ ತರಿಸಿಕೊಂಡಿದ್ದೇವೆ. ಎಆರ್‌ಟಿಓ ಆಫೀಸಾಗಿ ಕೇವಲ ಎರಡು ವರ್ಷಗಳಾಯ್ತು. ಆದ್ದರಿಂದ 41, 855 ವಾಹನಗಳು ರಿಜಿಸ್ಟರ್ ಮೂರು ತಿಂಗಳ ಹಿಂದೆ ಆಗಿವೆ ಸ್ವಾಮಿ. ದಿನನಿತ್ಯ 10368 ವಾಹನಗಳು ಪಟ್ಟಣದೊಳಗಡೆ ಸಂಚರಿಸುತ್ತವೆ.

ಒಬ್ಬ ಆಕ್ಸಿಡೆಂಟಾಗಿ ಸತ್ತುಹೋದ. ಅವನಿಗೆ ಮದುವೆಯಾಗಿ ಒಂದು ವರ್ಷ ಆಗಿತ್ತು. ರಸ್ತೆಯಲ್ಲಿ ಹೋಗುತ್ತಿದ್ದಾಗ ಹಿಂದಿನಿಂದ ಲಾರಿ ಬಂದು ಅವನ ಮೇಲೆ ಹತ್ತಿ ಸತ್ತು ಹೋದ. ಅವನಿಗೆ ಮಗುವಿದೆ. ಅವರ ಜೀವನ ಹೇಗೆ ಸ್ವಾಮಿ? ಆದ್ದರಿಂದ ಯಾವುದೇ ಒತ್ತಡ ಇರದ ರೀತಿಯಲ್ಲಿ ಈ ಅಗಲೀಕರಣ ಆಗಬೇಕು. ಇಡೀ ರಾಜ್ಯದಲ್ಲಿ, ಸುತ್ತಮುತ್ತಲೆಲ್ಲಾ ಅಗಲೀಕರಣವಾಗಿದೆ. ಮಂಡ್ಯದಲ್ಲಿ ಆಗಿದೆ. ಹಾಸನದಲ್ಲಿ ಆಗಿದೆ. ಅರಸೀಕೆರೆಯಲ್ಲಿ ಆಗಿದೆ, ಶಿವಮೊಗ್ಗದಲ್ಲಿ ಆಗಿದೆ, ಭದ್ರಾವತಿಯಲ್ಲಿ ಆಗಿದೆ, ತುಮಕೂರಿನಲ್ಲಿ ಆಗಿದೆ, ಗುಬ್ಬಿಯಲ್ಲಿ ಆಗಿದೆ, ಸಿಆರ್ ಪಟ್ಟಣದಲ್ಲಿದೆ. ಚಿಕ್ಕನಾಯಕನಹಳ್ಳಿ ಹಾಗೂ ತುರುವೇಕೆರೆಯಲ್ಲೂ ಆಗಿದೆ. ನಾನು ಈಗಾಗಲೇ ಹೇಳಿದ ಹಾಗೆ 1997ರಲ್ಲಿ ರಸ್ತೆ ಅಗಲೀಕರಣ ಮಾಡಲುಹೋಗಿ ಕಾರಣಾಂತರದಿಂದ ತಡೆಯೊಡ್ಡಿದರು. ಅದರ ಈಗ ಅಗಲೀಕರಣ ಮಾಡುವುದಕ್ಕೆ ಸರ್ಕಾರ ಅನುಮತಿ ಕೊಡಬೇಕು ಎಂದು ತಮ್ಮನ್ನು ವಿನಂತಿಸುತ್ತೇನೆ. ನಮ್ಮಲ್ಲಿ ಲಕ್ಷಾಂತರ ಜನ ಓಡಾಡುತ್ತಿದ್ದಾರೆ.

ದಯವಿಟ್ಟು ನೀವು ಅದನ್ನು ಮಾಡಿಕೊಡಬೇಕು. ಇನ್ನು ನಮ್ಮ ತಿಪಟೂರು ತಾಲ್ಲೂಕಿನಲ್ಲಿ ಹೇಮಾವತಿ ನೀರನ್ನು ಗುಬ್ಬಿಯಿಂದ ಹಿಡಿದು ತುಮಕೂರುವರೆಗೆ ನಾವು ತೆಗೆದುಕೊಂಡು ಹೋಗುತ್ತಿದ್ದೇವೆ. ಆ ನೀರು ನನ್ನ ಕ್ಷೇತ್ರದಲ್ಲಿ ಬರುತ್ತದೆ ಸ್ವಾಮಿ. 125 ರಿಂದ 60 ಅಡಿಯಷ್ಟು ಆಳ ಬಂದಿದೆ. ಇದರಿಂದ ತೆಂಗಿನಮರಗಳೆಲ್ಲಾ ಒಣಗಿಹೋಗಿ ಇವತ್ತು ಹಳ್ಳಿಗಳಲ್ಲಿ ಕುಡಿಯುವುದಕಕೆ ನೀರಿಲ್ಲ. ಆದ್ದರಿಂದ ದಯವಿಟ್ಟು ಸಂಬಂಧಪಟ್ಟ ಮಂತ್ರಿಗಳು ಅಲ್ಲಿ ಬರುವ ಕೆರೆಗಳಿಗೆ ನೀರು ಬಿಡಿಸುವ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕುಡಿಯುವ ನೀರಿಲ್ಲದ ಕಡೆ ಬೋರ್‌ವೆಲ್‌ಗಳೂ ಬತ್ತಿಹೋಗಿವೆ, ಅವಕ್ಕೂ ಮಂತ್ರಿಗಳ ಕಡೆಯಿಂದ ಪರ್ಮಿಶನ್ ಕೊಡಿಸಬೇಕು ಅಂತ ಕೇಳಿಕೊಂಡು ನಮ್ಮ ಕೆರೆಗಳಿಂದ ಹೂಳು ಎತ್ತುವ ವಿಚಾರದಲ್ಲಿ ಬೆಳಿಗ್ಗೆಯಿಂದ ಸಾಕಷ್ಟು ಚರ್ಚೆ ನಡೆದಿದೆ. ನಮ್ಮಲ್ಲಿ ಕೆರೆಗಳು ಕಾವೇರಿ ಜಲಾನಯನಕ್ಕೂ ಸೇರಿವೆ, ಆ ಕೆರೆಗಳೆಲ್ಲಾ ಹೂಳು ತುಂಬಿಕೊಂಡಿದ್ದು ಅದೆಂಥದ್ದೋ ಒಂದು ಗಿಡ ಬೆಳೆದು ಹುಲಿ, ಕರಡಿ ಎಲ್ಲಿ ಮಲಗಿಕೊಂಡರೂ ಕಾಣುವುದಿಲ್ಲ ಸ್ವಾಮಿ. ಕೆರೆಗಳೆಲ್ಲಾ ಈ ತರಹ ಆಗಿವೆ. ಕೆರೆಗಳು ಊರ ಮಧ್ಯಭಾಗದಲ್ಲಿವೆ ಸ್ವಾಮಿ. ಆ ಕೆರೆಗಳಲ್ಲಿ ಇವತ್ತು ಕಾಡುಹಂದಿಗಳು ಚಿರತೆಗಳಿದ್ದರೂ ಗೊತ್ತಾಗುವುದಿಲ್ಲ ಆ ರೀತಿಯಲ್ಲಿ ಆಗಿದೆ. ಅದರೊಳಗೆ ಚಿರತೆ ಹೋಗಿ ಮಲಗಿಕೊಂಡರೂ ಗೊತ್ತಾಗುವುದಿಲ್ಲ. ಆದ್ದರಿಂದ ದಯವಿಟ್ಟು ಆ ಗಿಡಗಳನ್ನು ಕೀಳುವುದು, ಹೂಳೆತ್ತುವುದು ಹಾಗೂ ರಸ್ತೆಯನ್ನು ಅಗಲೀಕರಣ ಕಾಮಗಾರಿಯನ್ನು ಕೂಡಲೇ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತಾ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ವಿಷಯ: ಬೆಂಗಳೂರಿನಿಂದ ಕಾರವಾರದವರೆಗೂ ರಸ್ತೆ ಅಗಲೀಕರಣ ಎಲ್ಲಾ ಕಡೆ ಆಗಿದೆ. ತಿಪಟೂರಿನಲ್ಲಿ ಹಾಗೂ ಕಡೂರಿನಲ್ಲಿ ಆಗಿಲ್ಲ. ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳು ಯೂನಿಫಾರ್ಮಾಗಿ ಎಷ್ಟಿರಬೇಕು ಹಾಗೂ ಎಂಬ ನಿಯಮ ಇದೆ. ಹಿಂದೆ ಪುರಸಭೆಯವರು ಮಾಡಿದ ತಪ್ಪಿನಿಂದ ಇವತ್ತು ರಾಷ್ಟ್ರೀಯ ಹೆದ್ದಾರಿಗಳು ಬಹಳ ಚಿಕ್ಕದಾಗಿ ಅನಾಹುತಗಳಿಗೆ ಕಾರಣವಾಗುತ್ತಾ ಇದೆ. ಮಾನ್ಯ ನಂಜಾಮರಿಯವರು ಹೇಳಿದಂತೆ ಬೆಂಗಳೂರಿನಿಂದ ಕಾರವಾರದವರೆಗಿನ ಎಲ್ಲಾ ಊರುಗಳಲ್ಲಿ ಮಾಡಿದ್ದರೂ ಕಡೂರು, ಹಾಗೂ ತಿಪಟೂರುಗಳಲ್ಲಿ ಮಾಡಿಲ್ಲ. ಇದನ್ನು ಸರ್ಕಾರದ ಗಮನಕ್ಕೆ ಶೂನ್ಯ ವೇಳೆಯಲ್ಲಿ ತಮ್ಮ ಮೂಲಕ ತರುತ್ತಿದ್ದೇನೆ.